Date : 13-Nov-2005 Edition : Bangalore Page No.: 9 Page Name: Back Page Size: 100%

Sector: IT Circulation: 148004 AVE: Rs.41056.95 Frequency: Daily

Publication: Samyukta Karnataka Title: Asia Total.net company will provide computer with internet

# Samyukta Karnataka

## ಏಷ್ಯಾ ಟೋಟಲ್ ನೆಟ್ ಕಂಪನಿಯಿಂದ ಕಂಪ್ಯೂಟರ್-ಇಂಟರ್‌ನೆಟ್ ಸೌಲಭ್ಯ

ಬೆಂಗಳೂರು, ನ. 12- ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನಲ್ಲಿ ಸಮುದಾಯಗಳ ನಡುವೆ ಇರುವ ತಂತ್ರಜ್ಞಾನ ಅಂತರ ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಂಗ್ ಕಾಂಗ್ ಮೂಲದ ಏಷ್ಯಾ ಟೋಟಲ್ ನೆಟ್ ಕಂಪನಿ ವಿಶೇಷವಾಗಿ ನಿರ್ಮಿಸಿದ ಕಂಪ್ಯೂಟರ್ ಮತ್ತು ಇಂಟರ್ ನೆಟ್ ಸೌಲಭ್ಯವನ್ನು ಭಾರತಕ್ಕೆ ಕಲ್ಪಿಸಿಕೊಡಲು ಮುಂದಾಗಿದೆ.

ಅಲ್ಪ ಆದಾಯ ಇರುವ ವ್ಯಕ್ತಿಗಳು ಹಾಗೂ ಸಣ್ಣ ಕಂಪನಿ ಹೊಂದಿರುವ ವ್ಯಕ್ತಿಗಳಿಗೆ ವಿಶೇಷವಾಗಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸುವುದು ಈ ಐಟಿ ವಿನೂತನ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಏಷ್ಯಾ ಟೋಟಲ್ ನೆಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜುಡಿ ಎಸ್. ಚೆನ್ ಪತ್ರಿಕಾಗೋಷ್ಠಿಯಲ್ಲಿಂದು ತಿಳಿಸಿದರು.

ಈ ಯೋಜನೆಯು ಸ್ಪರ್ಧಾತ್ಮಕ ಬೆಲೆಗಳ ಕಂಪ್ಯೂಟರ್‌ಗಳನ್ನು ಇಂಟರ್ ನೆಟ್ ಬಳಕೆಗಾಗಿ ನೀಡುವುದು ಮತ್ತು ಬರುವ ಲಾಭವನ್ನು ಪಾಲುದಾರ ಕಂಪನಿಗಳ ನಡುವೆ ಹಂಚಿಕೆ ಮಾಡುವ ಅತ್ಯಂತ ಸರಳ ವ್ಯಾಪಾರ ಮಾದರಿ ಹೊಂದಿದೆ ಎಂದು ವಿವರಿಸಿದರು. ಮೊದಲ 2 ಲಕ್ಷ ಯುನಿಟ್ ಕಂಪ್ಯೂಟರ್‌ಗಳು ಬರುವ ಕೆಲವೇ ತಿಂಗಳಲ್ಲಿ ಬ್ರೆಜಿಲ್‌ಗೆ ಹೋಗಲಿವೆ ಎಂದು ತಿಳಿಸಿದರು.

ಸೆಲ್ಫ್ ಫೈನಾನ್ಸಿಂಗ್ ಮಾದರಿ ಆಧರಿಸಿರುವ ಈ ಯೋಜನೆ ಶಿಕ್ಷಣ, ವೈದ್ಯಕೀಯ, ಹಣಕಾಸು ಮತ್ತು ಮನರಂಜನೆ ಕ್ಷೇತ್ರಗಳಲ್ಲಿನ ಅರ್ಹ ವ್ಯಕ್ತಿಗಳು ಮತ್ತು ಸಣ್ಣ ಉದ್ದಿಮೆದಾರರು ಈ ಯೋಜನೆ ಲಾಭ ಪಡೆಯಲಿದ್ದಾರೆ.

ಈ ಐಟಿ ಪ್ಯಾಕೇಜ್‌ನಡಿಯಲ್ಲಿ ಒಂದು ಪೋರ್ಟಬಲ್ ಭಾಷಾ ಆಧಾರಿತ ಪ್ಯಾಕೇಜ್ ಆಗಿದ್ದು ಇದರಲ್ಲಿ ಒಂದು ಮೌಸ್ ಒಂದು ಏಳಿಂಚು ಎತ್ತರದ ಎಲ್.ಸಿ.ಡಿ. ಮಾನಿಟರ್ ಜೊತೆಗೆ ಎರಡು ಸ್ಪೀಕರ್‌ಗಳು ಹಾಗೂ ಅಗತ್ಯ ಸಾಮಗ್ರಿ ಹೊಂದಿದೆ.

ಅವಕಾಶ ವಂಚಿತರು, ಬಡವರು ಕಂಪ್ಯೂಟರ್ ಹಾಗೂ ಇಂಟರ್ ನೆಟ್ ಬಳಕೆ ಮಾಡುವುದು ಐಟಿ ಯೋಜನೆಯ ಆಶಯವಾಗಿದೆ.



© Samyukta Karnataka